**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ.234/2018</u>**

**<u>ಪಿ.ಡಬ್ಲ್ಯೂಃ 1</u>**

| | | |
|---|---|---|
| ಸಾಕ್ಷಿದಾರನ ಹೆಸರು | : | ಮಹಾಲಿಂಗಪ್ಪ |
| ತಂದೆಯ ಹೆಸರು | : | ಲೇಟ್ ದೊಡ್ಡ ಸೋಮಪ್ಪ |
| ವಯಸ್ಸು | : | 43 ವರ್ಷ |
| ಕೆಲಸ | : | ಹೆಚ್ ಸಿ ತೆಕ್ಕಲಕೋಟೆ ಪೊಲೀಸ್ ಠಾಣೆ |
| ವಾಸ | : | ತೆಕ್ಕಲಕೋಟೆ |

**<u>ಸಾಕ್ಷಿಗೆ ದಿನಾಂಕಃ09.01.2024 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರ ಅಡಿಯಲ್ಲಿ ಸಾಕ್ಷಿದಾರರ ಹೇಳಿಕೆಃ</u>**

1. ನಾನು 21.01.2021 ರಿಂದ ಈವರೆಗೆ ತೆಕ್ಕಲಕೋಟೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣದಲ್ಲಿ ಆರೋಪಿಯಾದ ಸುಭಾನ್ ಸಾಬ್ ತಂದೆ ಪೀರ್ ಸಾಬ್ ಈತನ ವಿರುದ್ದ ನ್ಯಾಯಾಲಯವು ಹೋರಡಿಸಿದ ಉದ್ಘೋಷಣ ವಾರಂಟ್ ನ್ನು ನಾನು ಸಿವೇಕರಿಸಿ ದಿಃ13.09.2022 ರಂದು ಸದರಿ ಆರೋಪಿಯ ವಿಳಾಸ ತೆಕ್ಕಲಕೋಟೆ ಪಟ್ಟಣದ 3 ನೇ ವಾರ್ಡ್ ನಲ್ಲಿ ಇರುವ ಬಾವಿ ಮನೆ ಪೀರ್ ಸಾಬ್ ರವರ ಮನೆಯ ಹತ್ತಿರ ಹೋಗಿ ಆರೋಪಿಯ ಕುರಿತು ಉದ್ಘೋಷಣ ವಾರಂಟ್ ನ್ನು ನಮ್ಮ ಠಾಣೆಯ ಪೋಲೀಸ್ ಸಿಬ್ಬಂದಿ ವಿಜಯ್ ಅಮೃತ ರಾಜ್ ರವರನ್ನು ಆರೋಪಿಯ ಮನೆಯ ಹತ್ತಿರ ಕರೆಯಿಸಿ ಆತನ ಕುರಿತು ವಿಚಾರಣೆ ಮಾಡಿ ಆತನ ವಿಳಾಸ ಯಾರಿಗೂ ಗೊತ್ತಿಲ್ಲ ಎಂದು ಗೊತ್ತಾದ ನಂತರ ಆರೋಪಿಯ ಅಣ್ಣ ಸಾದಂಹುಸೇನ್ ಸಾಬ್ , ಆರೋಪಿಯ ತಮ್ಮ ಇಸ್ಮಾಯಿಲ್ ಸಾಬ್ ಇವರನ್ನು ವಿಚಾರಿಸಿದಾಗ ಆರೋಪಿಯು ತಮ್ಮತಂದೆಯಾದ ಪೀರ್ ಸಾಬ್ ರವರು ಮರಣ ಹೊಂದಿದಾಗಲೂ ಸಹ ಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಕುರಿತು ಸದರಿಯವರ ಜೊತೆ ನಾನು ಬಾವಚಿತ್ರ ಪಡೆದು ಇಸ್ಮಾಯಿಲ್ ಸಾಬ್ ಮತ್ತು ಹೊನ್ನೂರ ಸಾಬ್ ಇವರ ಸಮಕ್ಷಮ ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಬರೆದು ಸಹಿ ಪಡೆದಿರುತ್ತೇನೆ. ಸ್ಥಳದಲ್ಲಿ ಆರೋಪಿಯಕುರಿತು ಡಂಗೂರ ಸಾರುವಂತೆ ರೂ.150/-ಗಳನ್ನು

ಅಲ್ಲಾಸಾಬ್ ತಂದೆ ಶೇಖಣ್ಣ ವಾಸ 5 ನೇ ವಾರ್ಡ ತೆಕ್ಕಲಕೋಟೆ ಇವರಿಗೆ ನೀಡಿ ಡಂಗೂರ ಸಾರಿಸಿ ಈ ಕುರಿತು ಆತನ ಹೇಳಿಕೆ ಮತ್ತು ಬಾವಚಿತ್ರವನ್ನು ಪಡೆದಿರುತ್ತೇನೆ ಅಲ್ಲದೆ ಉದ್ಘೋಷಣ ವಾರಂಟ್ ನ್ನು ತೆಕ್ಕಲಕೋಟೆ ಬಸ್ ನಿಲ್ದಾಣದಲ್ಲಿ ಅಂಟಿಸಿ ಬಾವಚಿತ್ರ ಪಡೆದಿರುತ್ತೇನೆ. ಆರೋಪಿತನಿಗೆ ಇರುವ ಆಸ್ತಿಗಳ ಬಗ್ಗೆ ಮಾಹಿತಿ ಕೊಡಬೇಕಂದು ದಿಃ14.09.2022 ರಂದು ಪಟ್ಟಣ ಪಂಚಾಯ್ತಿ ತೆಕ್ಕಲಕೋಟೆ ಮತ್ತು ತಹಶೀಲ್ದಾರ್ ರವರು ಸಿರುಗುಪ್ಪ ಇವರಿಗೆ ಅರ್ಜಿಯನ್ನು ಸಲ್ಲಿಸಿ ಸ್ವೀಕೃತಿ ಪಡೆದಿರುತೆತೇನೆ. ಉದ್ಘೋಷಣ ವಾರಂಟ್ ಜಾರಿಯಾದ ಕುರಿತು ದಿಃ15.09.2022 ರಂದು ನ್ಯಾಯಾಲಯಕ್ಕೆ ನಾನು ವರದಿ ಸಲ್ಲಿಸಿರುತ್ತೇನೆ.

3. ದಿಃ13.09.2022 ರಂದು ಬರೆಯಲಾದ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ ) ಎಂದು ಆ ಸಮಯದಲ್ಲಿ ಪಡೆಯಲಾದ ಬಾವಚಿತ್ರವನ್ನು ನಿ,ಪಿ.2 ಎಂದು, ಡಂಗೂರ ಸಾರಿಸಿದ ವ್ಯಕ್ತಿಯ ಹೇಳಿಕೆಯನ್ನು ನಿ,ಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ ) ಎಂದು ಡಂಗೂರ ಸಾರಿಸುವ ಸಮಯದಲ್ಲಿ ತೆಗೆಯಲಾದ ಬಾವಚಿತ್ರವನ್ನು ನಿ,ಪಿ.4 ಎಂದು, ಉದ್ಘೋಷಣ ವಾರಂಟ್ ನ್ನು ಬಸ್ ನಿಲ್ದಾಣದಲ್ಲಿ ಅಂಟಿಸುವ ಸಮಯದಲ್ಲಿ ತೆಗೆಯಲಾದ ಬಾವಚಿತ್ರವನ್ನು ನಿ,ಪಿ.5 ಎಂದು, ನ್ಯಾಯಾಲಯುಕ್ಕೆ ಬರೆದುಕೊಂಡ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**